**ಸೇಡಂ ನಗರದ ಆಸ್ಪತ್ರೆಯ ಔಷಧಿಗಳಿಗಾಗಿ ಮಂಜೂರು ಮಾಡುವ ಹಣ**

2726 - ಶ್ರೀ ಬಸವಂತ ರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) *ಗುಲ್ಬರ್ಗಾ ಜಿಲ್ಲೆಯ ಸೇಡಂ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಪ್ರತಿ ತಿಂಗಳು ಚಿಕಿತ್ಸೆ ಪಡೆಯುತ್ತಿರುವ ಹೊರ ರೋಗಿಗಳ ಮತ್ತು ಒಳರೋಗಿಗಳ ಸಂಖ್ಯೆ ಎಷ್ಟು?*

ಆ) *ಈ ಆಸ್ಪತ್ರೆಯಲ್ಲಿ ಪ್ರತಿ ತಿಂಗಳು ಔಷಧಿಗಾಗಿ ಖರ್ಚು ಮಾಡುತ್ತಿರುವ ಹಣವೆಷ್ಟು? ಹಾಗೂ ಈ ಔಷಧಿಗಳನ್ನು ಖರೀದಿ ಮಾಡುವವರು ಜಿಲ್ಲಾ ಪರಿಷತ್ತಿನವರೋ ಅಥವಾ ಸರ್ಕಾರದವರೋ?*

ಇ) *ಸರ್ಕಾರದ ಔಷಧಿಗಳಿಗಾಗಿ ಮಂಜೂರು ಮಾಡುವ ಹಣವು ಪ್ರತಿ ತಿಂಗಳು ಚಿಕಿತ್ಸೆ ಪಡೆಯುವ ರೋಗಿಗಳಿಗೆ ಸಕಾಗುವುದೇ?*

ಈ) *ಒಂದು ವೇಳೆ ಸಾಕಾದ ಪಕ್ಷದಲ್ಲಿ ಬಡ ರೋಗಿಗಳ ಆರೋಗ್ಯಕ್ಕಾಗಿ ಸರ್ಕಾರವು ಮಾಡುವ ವ್ಯವಸ್ಥೆಯೇನು? ಹಾಗೂ ಎಂದಿನಿಂದ ಮಾಡಲಾಗುವುದು?*

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಹೊರ ರೋಗಿಗಳು - 3638

ಒಳ ರೋಗಿಗಳು - 69

ಆ) ಪ್ರತಿ ತಿಂಗಳು ಈ ಆಸ್ಪತ್ರೆಯಲ್ಲಿ ಔಷಧಿಗಾಗಿ ಸರಾಸರಿ ರೂ. 9000 ಹಣ ಖರ್ಚು ಮಾಡಲಾಗುತ್ತಿದೆ. 90-91ನೇ ಸಾಲಿನಲ್ಲಿ ಜಿಲ್ಲಾ ಪರಿಷತ್‌ನಿಂದ ಔಷಧಿ ಖರೀದಿಸಲಾಗಿದೆ. ಈ ಸಾಲಿನಲ್ಲಿ ಶೇಕಡಾ 60ರಷ್ಟು ಸರ್ಕಾರದಿಂದಲೂ ಶೇಕಡಾ 40ರಷ್ಟು ಜಿಲ್ಲಾ ಪರಿಷತ್‌ನಿಂದಲೂ ಖರೀದಿ ಮಾಡಲಾಗುವುದು.

ಇ) ಇಲ್ಲ.

ಈ) ಅವಶ್ಯಕತೆ ಬಗ್ಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ನಿರ್ದೇಶಕರು ಅಂದಾಜು ಮಾಡಿದ್ದು, ಆ ಆಧಾರದ ಮೇಲೆ ಆಯವ್ಯಯದಲ್ಲಿ ಹಣದ ಲಭ್ಯತೆಯನ್ನು ಅನುಸರಿಸಿ ಹೆಚ್ಚಿಗೆ ಹಣವನ್ನು ಒದಗಿಸಲಾಗುವುದು.

**ಚಂಚೋಳಿ ತಾಲ್ಲೂಕಿನ ವಿರಾಣ್ಯ ಗ್ರಾಮದ ಗೈರಾಣ ಭೂಮಿಯಲ್ಲಿ ರೈತರು ಉಪಯೋಗಿಸುವ ಹಾದಿಯನ್ನು ಗುತ್ತಿಗೆ ನೀಡಿದ ಬಗ್ಗೆ.**

3718 - ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) *ಸರ್ಕಾರಿ ಗೈರಾಣ ಭೂಮಿ ಶಹಾಬಾದ ಗಣಿಗಳ ಪರ್ಸಿ ತೆಗೆಯಲು ಕಾನೂನು ಪ್ರಕಾರ 4 ಎಕರೆ 37 ಗುಂಟೆಗಿಂತಲೂ ಹೆಚ್ಚು ಗುತ್ತಿಗೆ ಮಂಜೂರು ಮಾಡಲು ನಿರ್ಬಂಧವಿದೆಯೇ?*

ಆ) *ಭೂಮಿತಿ ಹಿಡುವಳಿ ತಕ್ಕಮಿತಿಯಲ್ಲಿ ಭೂಮಿ ಇದ್ದರೆ ಅವರಿಗೆ ಪುನಃ ಹೆಚ್ಚಿನ ಭೂಮಿ ಗುತ್ತಿಗೆ ಆಧಾರದ ಮೇಲೆ ಕೊಡಬಹುದೇ?*

ಇ) *ಸರ್ಕಾರಿ ಗೈರಾಣ ಭೂಮಿಯಲ್ಲಿ ರೈತರಿಗೆ ಅವರ ಎತ್ತು ಬಂಡಿಗಳನ್ನು ಹೊಗಿ ಬರಲು ಪುರಾತನ ಕಾಲದಿಂದ ಹಾದಿ ಇದ್ದರೆ ಆ ಹಾದಿಯನ್ನು ಕಡೆಗಣಿಸಿ ಗುತ್ತಿಗೆ ಆಧಾರದ ಮೇಲೆ ಕೊಡಬಹುದೇ?*